**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ : ಶ್ರೀ.ಬಂಗಾರಸ್ವಾಮಿ, ಮುಖ್ಯ ಇಂಜಿನಿಯರ್ (ನಿವೃತ್ತ) ಇವರು ಕಾವೇರಿ ಜಲ ವಿವಾದವೂ ಸೇರಿದಂತೆ ಅಂತರ ರಾಜ್ಯ ಜಲ ವಿವಾದಗಳ ಸಮನ್ವಯಾಧಿಕಾರಿ ಹಾಗೂ ಸಲಹೆಗಾರರಿಗೆ ವೃತ್ತಿ ಶುಲ್ಕ ಹಾಗೂ ಸೌಲಭ್ಯಗಳನ್ನು ನಿಗದಿಪಡಿಸುವ ಬಗ್ಗೆ.

***

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ: ಜಸಂಇ 13 ಮವಿಇ 2017 ದಿನಾಂಕ:16.01.2020.

2) ಶ್ರೀ ಬಂಗಾರಸ್ವಾಮಿ, ಮುಖ್ಯ ಇಂಜಿನಿಯರ್ (ನಿವೃತ್ತ) ಇವರ ಪತ್ರಗಳ ದಿನಾಂಕ: 17.01.2020 ಮತ್ತು ದಿನಾಂಕ:17.08.2020.

3) ಮುಖ್ಯ ಇಂಜಿನಿಯರ್ (ಅಂತರ ರಾಜ್ಯ ಜಲ), ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ ಇವರ ಪತ್ರ ಸಂ: ಜಸಅ/ಅಂರಾಜ/ಬಂಗಾರಸ್ವಾಮಿ/ವೃತ್ತಿ ಶುಲ್ಕ/1353/2020-21 ದಿನಾಂಕ:14.09.2020.

ಪ್ರಸ್ತಾವನೆ:

1. ಕಾವೇರಿ ಜಲ ವಿವಾದ ಸೇರಿದಂತೆ, ಎಲ್ಲಾ ಅಂತರ ರಾಜ್ಯ ಜಲವಿವಾದಗಳಲ್ಲಿ ಸಮನ್ವಯಾಧಿಕಾರಿ ಮತ್ತು ಸಲಹೆಗಾರರಾಗಿ ಶ್ರೀ ಬಂಗಾರಸ್ವಾಮಿ, ಮುಖ್ಯ ಇಂಜಿನಿಯರ್ (ನಿವೃತ್ತ) ಇವರ ಸೇವೆಯನ್ನು ಪಡೆಯಲು ಮೇಲೆ ಓದಲಾದ ಕ್ರಮಸಂಖ್ಯೆ (1)ರ ಆದೇಶದಲ್ಲಿ ಸರ್ಕಾರದ ಅನುಮೋದನೆ ನೀಡಲಾಗಿದೆ ಮತ್ತು ಓದಲಾದ ಕ್ರಮ ಸಂಖ್ಯೆ(4)ರ ಆದೇಶದಲ್ಲಿ ಸದರಿಯವರನ್ನು ಮುಂದುವರೆಸಲಾಗಿದೆ.

2. ಶ್ರೀಯುತರು ಮೇಲೆ ಓದಲಾದ ಕ್ರಮಸಂಖ್ಯೆ (2)ರ ಪತ್ರದಲ್ಲಿ ಕಾರ್ಯವರದಿ ಮಾಡಿಕೊಂಡು, ಹುದ್ದೆಯ ಜವಾಬ್ದಾರಿ ನಿರ್ವಹಿಸಲು ಸೂಕ್ತ ಕಛೇರಿ, ಸಿಬ್ಬಂದಿ, ವಾಹನ ಮತ್ತಿತರೆ ಸೌಲಭ್ಯಗಳನ್ನು ಒದಗಿಸುವಂತೆ ಕೋರಿರುತ್ತಾರೆ. ಮುಂದುವರೆದು, ಶ್ರೀಯುತರು ದಿನಾಂಕ:17.08.2020ರ ಪತ್ರದಲ್ಲಿ ಈಗಾಗಲೇ ಸರ್ಕಾರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪ್ರಧಾನ ಸಮನ್ವಯಾಧಿಕಾರಿಗಳಿಗೆ ನಿಗದಿಪಡಿಸಲಾಗಿದ್ದ ಸೌಲಭ್ಯಗಳನ್ನು ನೀಡುವಂತೆ ಕೋರಿ, ಅವರಿಗೆ ನೀಡಬಹುದಾದ ಸೌಲಭ್ಯಗಳನ್ನು ತಿಳಿಸಿರುತ್ತಾರೆ.

3. ಮುಖ್ಯ ಇಂಜಿನಿಯರ್ (ಅಂತರ ರಾಜ್ಯ ಜಲ) ಇವರು ಮೇಲೆ ಓದಲಾದ ಕ್ರಮಸಂಖ್ಯೆ (3)ರ ಪತ್ರದಲ್ಲಿ ಶ್ರೀಯುತರು ಕಾರ್ಯನಿರ್ವಹಿಸಬೇಕಾಗಿರುವ ಕಾರ್ಯಭಾರಗಳು ಹಾಗೂ ಅವರಿಗೆ ನೀಡಬಹುದಾದ ವೃತ್ತಿ ಶುಲ್ಕ/ಸೌಲಭ್ಯಗಳ ಕುರಿತು ಪ್ರಸ್ತಾವನೆಯನ್ನು ಸಲ್ಲಿಸಿ, ಸರ್ಕಾರದಿಂದ ಸೂಕ್ತ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

4. ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂ: ಜಸಂಇ 6 ಮವಿಇ 2020, ದಿನಾಂಕ :19.04.2021.**

ಶ್ರೀ ಬಂಗಾರಸ್ವಾಮಿ, ಮುಖ್ಯ ಇಂಜಿನಿಯರ್ (ನಿವೃತ್ತ) ಇವರ ಸೇವೆಯನ್ನು ಕಾವೇರಿ ಜಲ ವಿವಾದವೂ ಸೇರಿದಂತೆ ಅಂತರ ರಾಜ್ಯ ಜಲ ವಿವಾದಗಳಲ್ಲಿ ಸಮನ್ವಯಾಧಿಕಾರಿ ಹಾಗೂ ಸಲಹೆಗಾರರನ್ನಾಗಿ ಪಡೆಯಲು ದಿನಾಂಕ :17.01.2020ರಿಂದ ಜಾರಿಗೆ ಬರುವಂತೆ ಈ ಕೆಳಕಂಡ ಸಂಭಾವನೆ ಹಾಗೂ ಸೌಲಭ್ಯಗಳನ್ನು ನೀಡಲು ಸರ್ಕಾರದ ಅನುಮೋದನೆ ನೀಡಲಾಗಿದೆ :

ಅ. ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ/ಕಾವೇರಿ ನಿಗಮ ಕೇಂದ್ರ ಕಛೇರಿಯಲ್ಲಿ ಸೂಕ್ತ ಕಛೇರಿ ಸೌಲಭ್ಯವನ್ನು ಒದಗಿಸುವುದು.

ಆ. ಸಮನ್ವಯಾಧಿಕಾರಿ ಹಾಗೂ ಸಲಹೆಗಾರರಾಗಿ ಕಾರ್ಯನಿರ್ವಹಿಸಲು ವಾಹನ ಸೌಲಭ್ಯವನ್ನು ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆಯಿಂದ ನೀಡುವುದು.

ಇ. ಅಂತರ ರಾಜ್ಯ ಜಲ ವಿವಾದಗಳ ಸಂಬಂಧದಲ್ಲಿ ಸಮನ್ವಯಾಧಿಕಾರಿ ಹಾಗೂ ಸಲಹೆಗಾರರಾಗಿ ಕಾರ್ಯನಿರ್ವಹಿಸುವ ಪ್ರತಿ ದಿನಕ್ಕೆ ರಾಜ್ಯದ ಒಳಗೆ ಪ್ರತಿ ದಿನಕ್ಕೆ ರೂ.6,000/-

19/4/4 ....2

(ರೂ.ಆರು ಸಾವಿರ ರೂಪಾಯಿಗಳು ಮಾತ್ರ) ಹಾಗೂ ರಾಜ್ಯದ ಹೊರಗೆ ಪ್ರತಿ ದಿನಕ್ಕೆ ರೂ.6,500/-(ರೂ.ಆರು ಸಾವಿರದ ಐನೂರು ರೂಪಾಯಿಗಳು ಮಾತ್ರ) ವೃತ್ತಿ ಶುಲ್ಕ ನೀಡುವುದು.

ಈ. ಬೆಂಗಳೂರು ಕೇಂದ್ರ ಸ್ಥಾನವನ್ನಾಗಿ ಕಾರ್ಯನಿರ್ವಹಿಸುವುದು ಹಾಗೂ ನವದೆಹಲಿ ಒಳಗೊಂಡಂತೆ ಇತರೆ ಸ್ಥಳಗಳಿಗೆ ಕಾರ್ಯನಿಮಿತ್ತ ಪ್ರವಾಸ ಕೈಗೊಳ್ಳಬೇಕಾದ ಸಂದರ್ಭಗಳಲ್ಲಿ, ಕರ್ನಾಟಕ ಸರ್ಕಾರದ ಗ್ರೂಪ್ 'ಎ' ಅಧಿಕಾರಿಗಳಿಗೆ ಅನ್ವಯವಾಗುವ ಪ್ರಯಾಣ ಭತ್ಯೆ, ದಿನಭತ್ಯೆ ಮತ್ತು ಇತರೆ ಸೌಲಭ್ಯಗಳನ್ನು ಒದಗಿಸುವುದು.

ಉ. ಸದರಿಯವರ ನಿವಾಸದ ದ್ವೈವಾಸಿಕ ದೂರವಾಣಿ ವೆಚ್ಚ (ಮೊಬೈಲ್ ವೆಚ್ಚ ಸೇರಿದಂತೆ) ಗರಿಷ್ಠ ರೂ.2,000 (ಎರಡು ಸಾವಿರ ರೂಪಾಯಿಗಳು ಮಾತ್ರ) ಮೀರದಂತೆ ಭರಿಸುವುದು.

2. ಈ ಸಂಬಂಧ ತಗಲುವ ವೆಚ್ಚವನ್ನು ಜಲವಿವಾದಗಳ ವೆಚ್ಚಗಳನ್ನು ಭರಿಸಲು ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆಗೆ ಒದಗಿಸಲಾಗಿರುವ ಅನುದಾನದಡಿಯಲ್ಲಿ ಭರಿಸತಕ್ಕದ್ದು.

3. ಸದರಿ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 414 ಆಕೋ-1/2020 ದಿನಾಂಕ:30.03.2021ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,
19/4/21
(ಎಂ.ಎಸ್.ಮೋಹನ್)
ವಿಶೇಷ ಕರ್ತವ್ಯಾಧಿಕಾರಿ (ತಾಂತ್ರಿಕ-3),
ಜಲ ಸಂಪನ್ಮೂಲ ಇಲಾಖೆ.

ಪ್ರತಿಯನ್ನು :

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್.ಎಸ್.ಎ)/(ಇ & ಆರ್.ಎಸ್.ಎ)/(ಎ & ಇ), ಕರ್ನಾಟಕ.
2. ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ.
3. ನಿವಾಸಿ ಆಯುಕ್ತರು, ಕರ್ನಾಟಕ ಭವನ, ಚಾಣಕ್ಯಪುರಿ, ನವದೆಹಲಿ.
4. ಪ್ರಧಾನ ಇಂಜಿನಿಯರ್, ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು.
5. ಮುಖ್ಯ ಇಂಜಿನಿಯರ್ (ಅಂತರ ರಾಜ್ಯ ಜಲ), ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು.
6. ಶ್ರೀ ಬಂಗಾರಸ್ವಾಮಿ, ಮುಖ್ಯ ಇಂಜಿನಿಯರ್ (ನಿವೃತ್ತ) ಸಮನ್ವಯಾಧಿಕಾರಿ ಹಾಗೂ ಸಲಹೆಗಾರರು, ಅಂತರ ರಾಜ್ಯ ಜಲ ವಿವಾದ. {ಮುಖ್ಯ ಇಂಜಿನಿಯರ್ (ಅಂರಾಜ) ಇವರ ಮುಖಾಂತರ}
7. ವಿಶೇಷಾಧಿಕಾರಿ ಮತ್ತು ಪದನಿಮಿತ್ತ ಜಂಟಿ ಕಾರ್ಯದರ್ಶಿ (ಲೋಕೋಪಯೋಗಿ ಆರ್ಥಿಕ ಕೋಶ), ಆರ್ಥಿಕ ಇಲಾಖೆ.
8. ಉಪ ಕಾರ್ಯದರ್ಶಿ (ಶಿಷ್ಟಾಚಾರ), ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ವಿಧಾನ ಸೌಧ.
9. ಅಪರ ಮುಖ್ಯ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು(ಗ್ರೇಡ್-2)
10. ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು(ಗ್ರೇಡ್-1).
11. ಹೆಚ್ಚುವರಿ ಕಾರ್ಯದರ್ಶಿಗಳು/ಉಪ ಕಾರ್ಯದರ್ಶಿಗಳು (ಸೇವೆಗಳು)/(ಕೃಭಾಜನಿ), ಜಲ ಸಂಪನ್ಮೂಲ ಇಲಾಖೆ.
12. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.